ಮತ್ತು ಮಿತಿಯೂ ಹೌದು. ನನ್ನ ಅಭಿಪ್ರಾಯ ಮಹಾಕಾವ್ಯಗಳ ಬಗ್ಗೆ ಅಲ್ಲ. ಆಧುನಿಕ ಕಾವ್ಯದ ಬಗ್ಗೆ ಮಾತ್ರ ನಾನು ಹೇಳುತ್ತಾ ಇರುವುದು.

◆ **ನಿಮ್ಮ ಸಣ್ಣಕತೆಗಳ ಪ್ರಯಾಣ ಆರಂಭವಾದಾಗ ಯಾವ ದ್ವಂದ್ವವೂ ಇಲ್ಲದೆ ಮುಂದುವರೆಯಿತಾ?**

ನಾನು ಪದವಿ ಓದುತ್ತಿರುವಾಗ ಚಿತ್ರದುರ್ಗದಲ್ಲಿ ವಿದ್ಯಾರ್ಥಿ ಶಾಖೆಯ ಒಂದು ಕಥಾಸ್ಪರ್ಧೆ ಇತ್ತು. ಆ ಸ್ಪರ್ಧೆಗೆ ನಾನು 'ಪಾತರಗಿತ್ತಿ' ಎಂಬ ಕತೆ ಕಳಿಸಿದ್ದೆ. ಆ ಕತೆಗೆ ಮೊದಲ ಬಹುಮಾನ ಬಂದುಬಿಟ್ಟಿತ್ತು. ಆಮೇಲೆ ಮೈಸೂರು ಮಿತ್ರ ಪತ್ರಿಕೆಯವರು ಒಂದು ಕಥಾಸ್ಪರ್ಧೆ ಏರ್ಪಡಿಸಿದ್ದರು. ಅದಕ್ಕೆ ಕಳಿಸಿದ ಕತೆ ಕೂಡ ಬಹುಮಾನ ಪಡೆದಿತ್ತು. ಚಿಕ್ಕ ವಯಸ್ಸಿನಲ್ಲಿ ನಾನು ಸ್ಪರ್ಧೆಯ ಮಾಹಿತಿ ನೋಡಿದಾಗ ಕತೆ ಬರೆಯುತ್ತಿದ್ದೆ. ಬಹುಮಾನಗಳು ಬರುತ್ತಾ ಹೋದಂತೆ ನನಗೆ ಆತ್ಮವಿಶ್ವಾಸ ಹುಟ್ಟಲು ಶುರುವಾಯಿತು. ನಂತರ ನನ್ನ ಕತೆಯ ಕಾಯಕವನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಲು ಪ್ರಾರಂಭಿಸಿದೆ. ನನಗೆ ಬಹಳ ದೊಡ್ಡ ಪ್ರೋತ್ಸಾಹ ಸಿಕ್ಕಿದ್ದು ಪತ್ರಿಕೆಗಳಿಂದ. ನನ್ನ ಕತೆಗಳು ಪ್ರಜಾವಾಣಿ, ಸುಧಾ, ಮಯೂರ, ತರಂಗ, ತುಷಾರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದು ಮತ್ತು ಒಳ್ಳೆಯ ಓದುಗ ವರ್ಗ ದೊರೆಯುತ್ತಿದ್ದುದು ನನ್ನ ಸುಕೃತವೇ ಸರಿ.

ಇದರ ಜೊತೆಗೆ ನನಗೆ ಇಂಬು ಕೊಟ್ಟಿದ್ದು ಕರ್ನಾಟಕ ಲೇಖಕಿಯರ ಸಂಘ ಮತ್ತು ಹೇಮಲತಾ ಮಹಿಷಿ, ಎನ್. ಗಾಯತ್ರಿ, ಶಾಂತಾ ನಾಗರಾಜ್ ಮುಂತಾದ ಹಿರಿಯರು.

◆ **ಸಣ್ಣಕತೆಗಳಿಂದ ಕಾದಂಬರಿಗೆ ಕಾಲಿಟ್ಟ ನಿಮ್ಮ ಪ್ರಯಾಣ ಬಹು ಆಸಕ್ತಿದಾಯಕವಾಗಿದೆ. ಸಣ್ಣಕತೆಗಳಿಗೆ ಒಗ್ಗಿಕೊಂಡ ನೀವು ಅವನ್ನೆ ಕೊಂಚ ಹಿಗ್ಗಿಸಿ ಕಾದಂಬರಿ ಮಾಡಲಿಲ್ಲ. ಬದಲಿಗೆ ಅದಕ್ಕೆ ಬೇರೆ ಶಿಸ್ತು ಮೈಗೂಡಿಸಿಕೊಂಡಿರಿ. ಆ ಮಾನಸಿಕ ತಯಾರಿ ಹೇಗೆ ಸಾಧ್ಯವಾಗುತ್ತದೆ? ಮತ್ತು ನಿಮ್ಮನ್ನು ಪ್ರಭಾವಿಸಿದ ಸಂಗತಿಗಳು ಯಾವುವು?**

ನಾನು ಸೃಜನಶೀಲ ಕೃತಿಗಳನ್ನು ಬಹಳ ಆಸಕ್ತಿಯಿಂದ ಮನಸ್ಸಿಟ್ಟು ಓದುತ್ತೇನೆ. ಚಿಕ್ಕವಳಿದ್ದಾಗ ಓದಿನ ಖುಷಿಗಾಗಿ ಓದಿದರೆ, ಪದವಿ ತರಗತಿಗೆ ಬಂದಮೇಲೆ ಬಹಳ ಪ್ರಜ್ಞಾಪೂರ್ವಕವಾದ ಓದು ಶುರುವಾಯಿತು. ನಂತರ ಸ್ನಾತಕೋತ್ತರ ತರಗತಿಗೆ ಬಂದ ಮೇಲಂತೂ ನನ್ನ ಜಗತ್ತು ಇನ್ನೂ ಶ್ರೀಮಂತವಾಯಿತು. ಮಾನಸಗಂಗೋತ್ರಿಯಲ್ಲಿ ನಾನು ಎರಡು ವರ್ಷ ಸ್ನಾತಕೋತ್ತರ ಪದವಿ ಮಾಡಿ, ನಂತರ ಐದು ವರ್ಷ ಸಂಶೋಧನಾ ವಿದ್ಯಾರ್ಥಿಯಾಗಿ ಇದ್ದೆ. ಅಲ್ಲಿ ಕಳೆದ ಸಮಯ ನನ್ನ ಓದಿನ ಜಗತ್ತನ್ನು ಇನ್ನಿಲ್ಲದಂತೆ ಶ್ರೀಮಂತವಾಗಿಸಿತು. ನನ್ನ ಜೊತೆಯಲ್ಲಿದ್ದ ಸಹಪಾಠಿಗಳು ಬಹಳ ಆಸಕ್ತಿಯಿಂದ ಪುಸ್ತಕಗಳನ್ನು ಓದುತ್ತಿದ್ದರು. ಅದು ನಮ್ಮ ವಿಷಯ ಹೌದೋ ಅಲ್ಲವೋ ಎಂಬ ಪ್ರಶ್ನೆಯೇ ಇರಲಿಲ್ಲ. ಹೊಸ ಪುಸ್ತಕ ಬಂದ ತಕ್ಷಣ ಓದುವುದು, ಅದರ ಬಗ್ಗೆ ಚರ್ಚಿಸುವುದು ಇದನ್ನ ಬಹಳ ಸಂತೋಷದಿಂದ ಮಾಡುತ್ತಿದ್ದೆವು.

ನಾನು ಸಂಶೋಧನ ವಿದ್ಯಾರ್ಥಿಯಾಗಿದ್ದಾಗ ವಿಜಯಾ ದಬ್ಬೆ ಮೇಡಂ 'ಸಮತಾ ಅಧ್ಯಯನ ಕೇಂದ್ರ'ವನ್ನು ಹುಟ್ಟುಹಾಕಿದರು. ಅದು ಶುರುವಾದದ್ದೇ ತಡ ನಮ್ಮ ಪ್ರಪಂಚವೇ ಬದಲಾಯಿತು. ಮೊದಮೊದಲಿಗೆ ನಾವು ವಿದ್ಯಾರ್ಥಿನಿಯರೇ ಸೇರುತ್ತಿದ್ದವು. ಆಮೇಲೆ ಮೈಸೂರಿಗೆ ಯಾರೇ ಲೇಖಕಿಯರು ಬರಲಿ, ಅವರನ್ನು ಸಮತಾಕ್ಕೆ ಕರೆಸಿ ಪುಟ್ಟ ಸಂವಾದ ಕಾರ್ಯಕ್ರಮ ಮಾಡಿ ಅವರ ಮಾತುಗಳನ್ನು ಆಲಿಸುತ್ತಿದ್ದೆವು. ಆ ಸಂದರ್ಭದಲ್ಲಿ ನಾನು ಎಂ.ಕೆ. ಇಂದಿರಾ, ಎಚ್.ವಿ. ಸಾವಿತ್ರಮ್ಮ ಇನ್ನೂ ಹಲವಾರು ಲೇಖಕಿಯರ ಮಾತುಗಳನ್ನು ಕೇಳಿಸಿಕೊಳ್ಳುವ ಸದವಕಾಶ